## 1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿಸಿ ನಂಃ
10101/2012
ಪ್ರಾಸಾ.3 ಚಾಸಾ. 2

ಸಾಕ್ಷಿದಾರರ ಹೆಸರು ಃ ಡಾಕ್ಟರ್ ಕೇಶವಮೂರ್ತಿ
ತಂದೆಯ ಹೆಸರು ಃ ಲೇಟ್‌ದ್ಯಾಮಣ್ಣ
ವಯಸ್ಸು ಃ 66 ವರ್ಷ
ಉದ್ಯೋಗ ಃ ವೈದ್ಯರು
ವಾಸ ಃ ಬೆಂಗಳೂರು

ಸಾಕ್ಷಿಯನ್ನು ಕರೆಸಿ ದಿಃ 19.06.2016 ರಂದು ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸನ್ 2006 ರಲ್ಲಿ ನನಗೆ ಐಶ್ವರ್ಯಾ ಪ್ರಾಜೆಕ್ಟ್‌ನ ಏರೋಜೋನಾ ಡಿವಿಜನ್‌ನಕಚೇರಿಯ ಏಜೆಂಟರು ವಿಜಯಪುರದಲ್ಲಿ ನಿವೇಶನದ ಬಡಾವಣೆಗಳನ್ನು ಮಾಡಲಾಗುತ್ತಿದೆ ಹಾಗೂಸದರಿ ಪ್ರಾಜೆಕ್ಟ್‌ನಲ್ಲಿ ಹಣವನ್ನು ಹೂಡಿಕೆ ಮಾಡಲು ನನಗೆ ತಿಳಿಸಿರುತ್ತಾರೆ. ನಾನು ಸದರಿ ವಿಚಾರವನ್ನು ತಿಳಿದು ಸದರಿ ಸ್ಥಳಕ್ಕೆ ಹೋಗಿ ಸದರಿ ಬಡಾವಣೆನಿರ್ಮಾಣ ಮಾಡುತ್ತಿದ್ದ ಜಾಗವನ್ನು ನೋಡಿಕೊಂಡು ಬಂದಿರುತ್ತೇನೆಆದರೆ, ಅದು ಇನ್ನೂ ಅಭಿವೃದ್ದಿಗೊಂಡಿರುವುದಿಲ್ಲ. ನಾನು ಸೈಟ್ ನಂ.268 ನ್ನು 40 X 60 ವುಳ್ಳ ವಿಸ್ತೀರ್ಣ ಒಟ್ಟು ಮೌಲ್ಯ 14,00,400-00 ರೂಗೆ ಮಾತುಕತೆಯನ್ನು ನಡೆಸಿ ನವೆಂಬರ್ 2006 ರಲ್ಲಿ ಮುಂಗಡವಾಗಿ ಚೆಕ್ಕು ಹಾಗೂ ನಗದುರೂಪದಲ್ಲಿ ಹಣವನ್ನು ಸದರಿ ಸಂಸ್ಥೆಯವರಿಗೆ ಕೊಟ್ಟಿರುತ್ತೇನೆ. ನಾನು ಸದರಿ ಸೈಟನ್ನು ಬುಕ್‌ಮಾಡಿರುವವುದಕ್ಕೆ ಸದರಿ ಸಂಸ್ಥೆಯವರು ನನಗೆರಸೀದಿಯನ್ನು ಹಾಗೂಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಕ್ರಯದ ಕರಾರು ಪತ್ರದಂತೆ 6 ರಿಂದ 8 ತಿಂಗಳ ಒಳಗಾಗಿ ನನಗೆನಿವೇಶನವನ್ನು

ನೊಂದಣಿಮಾಡಿಸಿಕೊಡುವುದಾಗಿ ಸದರಿ ಕಂಪನಿಯವರುತಿಳಿಸಿರುತ್ತಾರೆ. ಆದರೆ, ಸದರಿ ಕಂಪನಿಯವರು ತಮ್ಮ ಕರಾರಿನಂತೆ ನಡೆದುಕೊಂಡಿರುವುದಿಲ್ಲ. ಸನ್ 2010 ರಲ್ಲಿ ಸದರಿ ಸಂಸ್ಥೆಯವರು ನನಗೆ ಒಂದು ಪತ್ರವನ್ನು ಕಳುಹಿಸಿ ಸದರಿ ಜಾಗವನ್ನು ಪ್ರಾಧೀಕಾರದಿಂದ ಅನುಮೋದನೆಮಾಡಿಕೊಳ್ಳಲು ವಿಳಂಭವಾಗುತ್ತಿದ್ದುಅದಕ್ಕಾಗಿ ಸಮಯವನ್ನು ಕೋರಿರುತ್ತಾರೆ. ನಾನು ಸನ್ 2011 ರಲ್ಲಿ ವಿಚಾರಣೆಯನ್ನು ಮಾಡಿದಾಗ ಸುಮಾರು ಜನರುಸದರಿ ಪ್ರಾಜೆಕ್ಟ್‌ನಲ್ಲಿ ಹಣವನ್ನು ತೊಡಗಿಸಿ ಮೋಸಹೋಗಿರುತ್ತಾರೆಂದು ತಿಳಿದು ಬಂದಿರುವುದಕ್ಕೆ ನಾನು ಸಿಸಿಬಿ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದುಅದನ್ನು ಈಗ ನಿಪಿ-3 ಹಾಗೂ ಸಾಕ್ಷಿಯಸಹಿಯನ್ನು ನಿಪಿ-3ಎ ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗಾಗಿ ವೇಳೆಯನ್ನು ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ. ಹೇ. ಕೇ. ಸ. ಇ

1ನೇ ಅ. ಮು. ಮ. ದಂ. ನ್ಯಾ.

( ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯ ಪಾಟೀಸವಾಲು ಮಾಡಲು ಅನುಮತಿ ನೀಡಬೇಕೆಂದು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾರ್ಥಿಸಿಕೊಂಡಿದ್ದು ಅನುಮತಿ ನೀಡಲಾಯಿತು. )